ಅ.ದಾ. ಸಂಃ 212/2015 ಡಿಡಬ್ಲ್ಯೂ01
ಪ್ರಕಾಶ್

ದಿ ಃ21-06.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃಃ ಶ್ರೀ ಎಸ್.ವಿ.ಆರ್ ವಾದಿ ಪರ ವಕೀಲರಿಂದಃ

ನಾನು ಅನಕ್ಷರಸ್ಥ . ಈ ದಾವೆಯನ್ನು ನನ್ನ ತಾಯಿಯ ವಿರುದ್ಧ ಸಲ್ಲಿಸಲಾಗಿದೆ ಎಂದರೆ ಸರಿ . ನಿಮ್ಮ ತಾಯಿಯು ಈ ದಾವೆಯ ಸಂಬಂಧ ಏನು ತಕರಾರು ಬರೆಯಿಸಿದ್ದಾರೆ ಎಂದು ನೀವು ತಿಳಿದುಕೊಂಡಿದ್ದರ ಎಂದರೆ ಸಾಕ್ಷಿಯು ತಕರಾರು ಇಲ್ಲಾ ಎಂದು ಹಾಗೂ ಜಮೀನಿನ ಹತ್ತಿರ ಯಾವುದೇ ಗಲಾಟೆ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಯು ಈ ದಾವೆಯ ಸಂಬಂಧ ಯಾವ ದಾಖಲೆಗಳನ್ನು ಸಲ್ಲಿಸಿದ್ದಾರೆ ಎಂದು ತಿಳಿದುಕೊಂಡಿದ್ದೇನೆ . ನಾನು ಸದರಿ ದಾಖಲೆಗಳನ್ನು ಖುದ್ದಾಗಿ ಪರಿಶೀಲಿಸಿಲ್ಲಾ ಎಂದರೆ ಸರಿಯಲ್ಲ.

ದಾವಾ ಮೂಲ ಸ.ನಂ 219 ಎಂದರೆ ಸರಿ . ಮೂಲ ಸ.ನಂ 219 ಒಟ್ಟು 9 ಎಕರೆಗಿಂತ ಜಾಸ್ತಿ ವಿಸ್ತೀರ್ಣ ಹೊಂದಿತ್ತು. ದಾವಾ ಮೂಲ ಸ.ನಂ 219 ಹೊಸದಾಗಿ 219/1, 219/2 ಹಾಗೂ 219/3 ಎಂದು ಬದಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಹೊಸ ಸ.ನಂ 219/1 ರಲ್ಲಿ 4 ಎಕರೆ ವಿಸ್ತೀರ್ಣ ಕಂದಾಯ ದಾಖಲೆಗಳಲ್ಲಿ ನಮೂದಾಗಿತ್ತು ಎಂದರೆ ಸರಿಯಲ್ಲ. ಹೊಸ ಸ.ನಂ 219/2 ರಲ್ಲಿ ಒಟ್ಟು ವಿಸ್ತೀರ್ಣ 2 ಎಕರೆ 1 ಗುಂಟೆ ವಿಗಂಡನೆಗೊಡ ಬಗ್ಗೆ ನಮೂದಾಗಿದ್ದು ಹಾಗೂ ಹೆಚ್.ಬಿ ಸದಾನಂದ ಬಿನ್ ಎಮ್ ಬಸವರಾಜಪ್ಪ ರವರ ಹೆಸರಿಗೆ ಸದರಿ ಕಂದಾಯ ದಾಖಲೆಗಳು ಇತ್ತು ಎಂದರೆ ಸರಿಯಲ್ಲ.

ಹೊಸ ಸ.ನಂ 219/3 ರಲ್ಲಿ ಒಟ್ಟು ವಿಸ್ತೀರ್ಣ ಖರಾಬು ಸೇರಿದಂತೆ 4 ಎಕರೆ 7 ಗುಂಟೆ ಜಮೀನಿದ್ದು ಅದು ಹೆಚ್.ಬಿ ಗಂಗರಾಜು ಬಿನ್ ಎಮ್ ಬಸವರಾಜಪ್ಪ ರವರ ಹೆಸರಿಗೆ ವಿಂಗಡನೆಯಾಗಿತ್ತು ಎಂದರೆ ಸರಿಯಲ್ಲ. ಹೊಸ ಸ.ನಂ 219/1 ರ ಆದೆಪ್ಪ ಬಿನ್ ಆದೆಪ್ಪ ರವರ ಹೆಸರಿಗೆ ವಿಂಗಡನೆಯಾಗಿ ಕಂದಾಯ ದಾಖಲೆಗಳು ಅವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. 1934 ರಿಂದ 1964 ರ ವರೆವಿಗೂ ನಮೂನೆ 5 ಮತ್ತು 6 ಆದೆಪ್ಪ ಬಿನ್ ಆದೆಪ್ಪ ಹೆಸರಿಗೆ ವಿಂಗಡೆನೆಯಾಗಿದೆ ಎಂದರೆ ಸರಿಯಲ್ಲ. 1965 ರಿಂದ 1999 ರ ವರೆಗೆ ಪಹಣಿ ಬಂದ ನಂತರ ಸದರಿ ಜಮೀನು ಆದೆಪ್ಪ ಬಿನ್ ಆದೆಪ್ಪ ಹೆಸರಿಗೆ ಇದೆ ಎಂದರೆ ಸರಿಯಲ್ಲ. ಸದರಿ ಆದೆಪ್ಪ ಬಿನ್ ಆದೆಪ್ಪ ರವರ ಹೆಸರು ಪಹಣಿಯ ಕಾಲಂ 12 ರಲ್ಲಿ ಕೈಬಿಟ್ಟಿದ್ದು ಆದರೆ ಕಾಲಂ 9 ರಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ.

ನಾನು ದಿಃ05-08-1927 ರ ಒಂದು ಕ್ರಯ ಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಪುಟ್ಟಪ್ಪನ ಮಗ ಆದೆಪ್ಪ ಸದರಿ ಕ್ರಯ ಪತ್ರವನ್ನು ಬೆರದಿರುವುದಾಗಿ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಡಿ 2 ರಲ್ಲಿ ಆದೆಪ್ಪ ಬಿನ್ ಆದೆಪ್ಪ ರವರು ಕ್ರಯ ಪತ್ರವನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ

ನಾನು ಹಾಜರುಪಡಿಸಿರುವ ನಿಪಿ 2 ಕ್ರಯಪತ್ರ ಬರೆದಾಗ ಸ .ನಂ 219/1 ಅಸ್ತಿತ್ವದಲ್ಲಿರಲಿಲ್ಲಾ ಹಾಗೂ ಸದರಿ ಕ್ರಯ ಪತ್ರದಲ್ಲಿ 219/1 ಎಂದು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರದಲ್ಲಿ ಯಾವ

ಸ್ವತಿನ ಸಂಬಂಧ ಹಾಗೂ ಎಷ್ಟು ವಿಸ್ತೀರ್ಣಕ್ಕೆ ಕ್ರಯ ಪತ್ರವು ಬರೆಯಲಾಗಿದೆ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ . ಸದರಿ ಕ್ರಯ ಪತ್ರದಲ್ಲಿ ಬರೆದಿರುವಂತೆ ಚೆಕ್ಕುಬಂದಿ ಪೂ.ಕ್ಕೆ 218 ರ ನಮ್ಮದೇ ಸ್ವತ್ತು ಇರುತ್ತದೆ. ಪ.ಕ್ಕೆ ಹಳ್ಳ ಇರುತ್ತದೆ , ಉ.ಕ್ಕೆ ಗಂಗರಾಜು ರವರ ಸ್ವತ್ತು ಇರುತ್ತದೆ ಹಾಗೂ ದ.ಕ್ಕೆ ನರಸಿಂಹಮೂರ್ತಿ ರವರ ಸ್ವತ್ತು ಇದೆ . ಆ ಕಾಲಕ್ಕೆ ನಾನು ಹೇಳಿದ ಚೆಕ್ಕುಬಂದಿ ಅಸ್ತಿತ್ವ ಇರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿದ್ದೇನೆ. ನಾನು ಹೇಳಿದ ಚೆಕ್ಕುಬಂದಿ ಸಂಬಂಧಿಸಿದ ಆಸ್ತಿಗೂ ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ.

ನಿಡಿ 3 ರಂತೆ ವೆಂಕಟಪ್ಪನ ಮಗ ವೆಂಕಟಶಾಮಪ್ಪನಿಗೆ ವರುಣಿ ಗ್ರಾಮದ ಪುಟ್ಟಪ್ಪನ ಮಗ ಆದೆಪ್ಪ ಹಾಗೂ ನಾರಾಯಣಪ್ಪ ಬಿನ್ ಆದೆಪ್ಪ ರವರು ದಿನಾಂಕ ಃ20-4-1955 ರಲ್ಲಿ ಕ್ರಯ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿ .

(ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಅವರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

ಅಸಿನ್ಯಾ.ಜೆಎಂಎಫ್‌ಸಿ, ಗೌರಿಬಿದನೂರು.